ಓ.ಎಸ್.ನಂ.**420/2013**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **05.08.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎನ್. ವಕೀಲರಿಂದ**

ನನ್ನ ತಂದೆ ಕೃಷಿ ಮಾಡುತ್ತಿದ್ದರು. ಅವರು **2** ಎಕರೆ **15** ಗುಂಟೆಯಲ್ಲಿ ವ್ಯವಸಾಯ ಮಾಡುತ್ತಿದ್ದರು. ಅದರ ಸರ್ವೆ ನಂಬರ್ **31/2.** ಸದರಿ ಆಸ್ತಿಯ ಖಾತೆ ಪಹಣಿಯು ನನ್ನ ತಂದೆಯ ಹೆಸರಿನಲ್ಲಿ ಇವೆ. ಸದರಿ ಆಸ್ತಿಯ ಚಕ್ಕುಬಂಧಿ ಗೊತ್ತು. ಪೂರ್ವಕ್ಕೆ – ನನ್ನ ಪಿತ್ರಾರ್ಜಿತ ಆಸ್ತಿ, ಪಶ್ಚಿಮಕ್ಕೆ – ಸರ್ವೆ ನಂ.**32/1** ಮತ್ತು **32/2** ರಲ್ಲಿ ಇರುವ ವೆಂಕಟರಮಣಪ್ಪ ಮತ್ತು ಕೃಷ್ಣಪ್ಪ ಹಾಗೂ ಅವರ ಹಿರಿಯರ ಜಮೀನು, ಉತ್ತರಕ್ಕೆ – ಆಂಜನೇಯಸ್ವಾಮಿ ಇನಾಮತಿ ಜಾಗ ಮತ್ತು ದಕ್ಷಿಣಕ್ಕೆ – ಸರ್ವೆ ನಂ.**31/3** ರಲ್ಲಿರುವ ವಿರೇಗೌಡರ ಜಮೀನು. ದಾವಾ ಆಸ್ತಿಯ ಪಶ್ಚಿಮಕ್ಕೆ – ಪ್ರತಿವಾದಿಯರಿಗೆ ಸೇರಿದ ಸರ್ವೆ ನಂ.**32/1** ಮತ್ತು **32/2** ರ ಜಮೀನು ಇದೆ. ಸದರಿ ಪಶ್ಚಿಮದ ಜಮೀನಿನ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಪ್ರತಿವಾದಿಯರ ಜಮೀನನ್ನು **1984–85** ರಿಂದ ನೋಡುತ್ತಿದ್ದೇನೆ. ನಾವು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಿಂದಲೂ ಪ್ರತಿವಾದಿಗಳು ಸದರಿ ಪಶ್ಚಿಮದ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸರ್ವೆ ನಂ.**32/1** ಮತ್ತು **32/2** ರಲ್ಲಿ ಪ್ರತಿವಾದಿಯರಿಗೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದರೆ ಗೊತ್ತಿಲ್ಲ. ಅದರಲ್ಲಿ ಪ್ರತಿವಾದಿಗಳು ರಾಗಿ ಬೆಳೆಯುತ್ತಿದ್ದಾರೆ. ಸರ್ವೆ ನಂ.**32/1** ಮತ್ತು **32/2** ರ ಮೂಲ ಮಾಲೀಕರು ಯಾರು ಎಂದರೆ ಗೊತ್ತಿಲ್ಲ. ಸದರಿ ಜಮೀನಿನ ರೆವಿನ್ಯೂ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ ಹೌದು. ಸದರಿ ಸರ್ವೆ ನಂ.**32/1** ಮತ್ತು **32/2** ರ ಜಮೀನಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ.

ಸರ್ವೆ ನಂ.**31/2** ರ ಒಟ್ಟು ವಿಸ್ತೀರ್ಣ **2** ಎಕರೆ **15** ಗುಂಟೆ. ಸದರಿ ಆಸ್ತಿಯ ಮೂಲ ಮಾಲೀಕರು ಚನ್ನಕೃಷ್ಣಯ್ಯ. ಸದರಿ ಆಸ್ತಿಯು ನ್ಯಾಯಾಲಯದ ಡಿಕ್ರಿ ಮೂಲಕ ಚನ್ನಕೃಷ್ಣಯ್ಯನವರ ಚಿಕ್ಕಮ್ಮನಾದ ಲಕ್ಷ್ಮಮ್ಮನಿಗೆ ಬಂದಿರುತ್ತದೆ. ಚನ್ನಕೃಷ್ಣಯ್ಯನ ಹೆಸರಿನಲ್ಲಿ ಎಷ್ಟು ಆಸ್ತಿ ಇತ್ತೋ ಅಷ್ಟು ಆಸ್ತಿ ಕೂಡ ಲಕ್ಷ್ಮಮ್ಮನ ಹೆಸರಿಗೆ ಬಂದಿರುತ್ತದೆ. ಲಕ್ಷ್ಮಮ್ಮನ ಗಂಡನ ಹೆಸರು ಹುಚ್ಚಯ್ಯ. ಹುಚ್ಚಯ್ಯನವರ ತಂದೆಯ ಹೆಸರು ಚಿಕ್ಕಗಂಗಯ್ಯ. ಲಕ್ಷ್ಮಮ್ಮನವರಿಂದ ಸದರಿ ಆಸ್ತಿಯು ನನ್ನ ತಂದೆಗೆ ಬಂದಿರುತ್ತದೆ. ಗಂಗಹನುಮಕ್ಕ ಕೋಂ ಮುನಿಶಾಮಯ್ಯ ಯಾರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ದಿನಾಂಕ:**02.04.1936** ರ ಕ್ರಯಪತ್ರದ ದೃಢೀಕರಣ ನಕಲನ್ನು ತೋರಿಸಿ ಅದರಲ್ಲಿ ಸರ್ವೆ ನಂ.**31/2** ರಲ್ಲಿ **1** ಎಕರೆ **1 1/2** ಗುಂಟೆ ವಿಸ್ತೀರ್ಣವನ್ನು ಗಂಗಹನುಮಕ್ಕ ಕೋಂ ಮುನಿಶಾಮಯ್ಯನವರು ಹುಚ್ಚಯ್ಯನವರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಈ ರೀತಿ ಕ್ರಯಪತ್ರವಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಆ ಕ್ರಯಪತ್ರದ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನನಗೆ ಮಾರಪ್ಪನ ಮಗ ವೆಂಕಟಶಾಮಯ್ಯನವರು ಗೊತ್ತು. ದಿನಾಂಕ:**20.04.1939** ರಂದು ಸರ್ವೆ ನಂ.**31/2** ರಲ್ಲಿ **1** ಎಕರೆ **1 1/2** ಗುಂಟೆ ವಿಸ್ತೀರ್ಣವನ್ನು ಮಾರಪ್ಪನ ಮಗ ವೆಂಕಟಶಾಮಯ್ಯನವರಿಗೆ ಗಂಗಹನುಮಕ್ಕ ಕೋಂ ಮುನಿಶಾಮಯ್ಯನವರು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರು ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಸದರಿ ಕ್ರಯಪತ್ರದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಹೌದು. ಈ ಎರಡು ಕ್ರಯಪತ್ರಗಳನ್ನು ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ಖರೀದಿದಾರರ ಹೆಸರಿಗೆ ಖಾತೆ ಪಹಣಿಯಾಗಿದೆ ಎಂದರೆ ಗೊತ್ತಿಲ್ಲ. ಸದರಿ ಖಾತೆ ಪಹಣಿಗಳನ್ನು ರೆವಿನ್ಯೂ ನ್ಯಾಯಾಲಯಗಳಲ್ಲಿ ಪ್ರಶ್ನೇ ಮಾಡಿದ್ದೀರಾ ಎಂದರೆ ಹೌದು. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಲಕ್ಷ್ಮಮ್ಮ ಕೋಂ ಚಿಕ್ಕರಂಗಣ್ಣ ಹಾಗೂ ಅವರ

ಮಗ ಹುಚ್ಚಯ್ಯ ರವರು ಸದರಿ ಒಂದು ಎಕರೆ ಒಂದೂವರೆ ಗುಂಟೆ ಜಮೀನನ್ನು ದಿನಾಂಕ:**02.04.1936** ರಲ್ಲಿ ಮುನಿಶಾಮಣ್ಣನ ಹೆಂಡತಿ ಗಂಗಹನುಮಕ್ಕನಿಗೆ ಮಾರಾಟ



ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.**31** ರಲ್ಲಿ **36 1/2** ಗುಂಟೆ ಜಮೀನನ್ನು ದಿನಾಂಕ:**20.04.1939** ರಂದು ಗಂಗಹನುಮಕ್ಕನವರು ವೆಂಕಟಶಾಮಯ್ಯನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ವೆಂಕಟಶಾಮಯ್ಯನವರ ತಂದೆಯ ಹೆಸರು ಮಾರಪ್ಪ ಎಂದರೆ ಗೊತ್ತಿಲ್ಲ. ವೆಂಕಟಶಾಮಯ್ಯ ಬಿನ್ ಮಾರಪ್ಪನವರು ಸದರಿ ಆಸ್ತಿಯನ್ನು ಖರೀದಿಸಿದ ನಂತರ ಅದರ ಖಾತೆ ಪಹಣಿಯು ಅವರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಖಾತೆಯು **1991–92** ರಲ್ಲಿ ಆಗಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ್ ಗಳು ತಪ್ಪಾಗಿವೆ ಎಂದು ದಾವಾ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಗೊತ್ತಿಲ್ಲ.

**2**ನೇ ಪ್ರತಿವಾದಿಯ ತಂದೆಯ ಹೆಸರು ವೆಂಕಟಶಾಮಯ್ಯ ಎಂದರೆ ಸರಿ. ಪ್ರತಿವಾದಿಗಳು ಸಹೋದರರು ಎಂದರೆ ಸರಿ. ವೆಂಕಟಶಾಮಯ್ಯನವರಿಂದ ಸರ್ವೆ ನಂ. **32/1** ಮತ್ತು **32/2** ರ ಖಾತೆಯು ವೆಂಕಟಶಾಮಯ್ಯನವರಿಂದ ಹುಚ್ಚಯ್ಯನವರಿಗೆ ಬಂದಿದೆ ಎಂದರೆ ಸರಿ. ನಂತರ ಹುಚ್ಚಯ್ಯನವರಿಂದ ಅವರ ಮಗನಾದ ಚನ್ನಕೃಷ್ಣಯ್ಯನವರ ಹೆಸರಿಗೆ ಖಾತೆ ಬಂದಿದೆ ಎಂದರೆ ಸರಿ. ಸದರಿ ಚನ್ನಕೃಷ್ಣಯ್ಯನವರು **2** ಎಕರೆ **15** ಗುಂಟೆಯನ್ನು ಪುಟ್ಟಶಾಮಯ್ಯನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಗಂಗಹನುಮಕ್ಕನಿಗೆ ಸೇರಿದ **36 1/2** ಗುಂಟೆಯನ್ನು ಸೇರಿಸಿದ್ದಾರೆ ಎಂದರೆ ಸರಿಯಲ್ಲ. ಗಂಗಹನುಮಕ್ಕನವರ ಹೆಸರಿನಲ್ಲಿ ಯಾವತ್ತಿಗೂ ಕೂಡ **2** ಎಕರೆ **15** ಗುಂಟೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. **1984** ರ ಕ್ರಯಪತ್ರವನ್ನು ನನ್ನ ತಂದೆ ಚನ್ನಕೃಷ್ಣಯ್ಯನವರ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.**32/1** ಮತ್ತು **32/2** ರಲ್ಲಿ **2**ನೇ ಪ್ರತಿವಾದಿಯ ಹೆಸರಿಗೆ ಒಂದು ಎಕರೆ ಒಂದೂವರೆ ಗುಂಟೆಯ ಖಾತೆ ಪಹಣಿಯಾಗಿದೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ.**32** ರ ಪಹಣಿಯನ್ನು

ನಾನೇಕೆ ನೋಡಲಿ ಎಂದು ಹೇಳುತ್ತಾರೆ. ದಾವಾ ಆಸ್ತಿಯ ನಕ್ಷೆ ಮತ್ತು ಟಿಪ್ಪಣಿಯ ಉತಾರ್ ನ್ನು ನ್ಯಾಯಾಲಯಕ್ಕೆ ಹಾಕಿದ್ದೀರಾ ಎಂದರೆ ಇಲ್ಲ.



ಈ ದಾವೆ ಹಾಕಿದಾಗ ಸರ್ವೆ ನಂ.**31/2** ರಲ್ಲಿರುವ **2** ಎಕರೆ **15** ಗುಂಟೆಯ ಖಾತೆ ಮತ್ತು ಪಹಣಿಯು ಪ್ರತಿವಾದಿಯರ ಹೆಸರಿನಲ್ಲಿ ಇತ್ತು. ಈಗಲೂ ಕೂಡ ಪ್ರತಿವಾದಿಯರ ಹೆಸರಿನಲ್ಲಿಯೇ ಇದೆ ಎಂದರೆ ಹೌದು. ಸದರಿ ಖಾತೆ ಪಹಣಿಯನ್ನು ಎ.ಸಿ. ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ. ಸದರಿ ಪ್ರಕರಣದ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಹೌದು.

ನನಗೆ ಈ ದಾವೆಯ ವ್ಯಾಜ್ಯ ಕಾರಣ ಗೊತ್ತು. ವ್ಯಾಜ್ಯ ಕಾರಣದ ತಾರೀಖು **2010**. ದಿನಾಂಕ:**17.12.1984** ರ ಕ್ರಯಪತ್ರದಲ್ಲಿ ದಾವಾ ಆಸ್ತಿಯ ಸರ್ವೆ ನಂಬರ್ ನ್ನು **31/2** ಎಂದು ನಮೂದಾಗಿದೆ ಹಾಗೂ ಅದರ ವಿಸ್ತೀರ್ಣ **2** ಎಕರೆ **15** ಗುಂಟೆ ಎಂದು ನಮೂದಾಗಿರುತ್ತದೆ. ಸದರಿ ಕ್ರಯಪತ್ರದಲ್ಲಿ ಪೂರ್ವಕ್ಕೆ – ನಮ್ಮ ಪಿತ್ರಾರ್ಜಿತ ಆಸ್ತಿ, ಪಶ್ಚಿಮಕ್ಕೆ – ಸರ್ವೆ ನಂ.**32** ರಲ್ಲಿ ಇರುವ ಪ್ರತಿವಾದಿಗಳ ಆಸ್ತಿ, ಉತ್ತರಕ್ಕೆ – ಆಂಜನೇಯಸ್ವಾಮಿ ಇನಾಮತಿ ಜಮೀನು, ಅದರಲ್ಲಿ ಪೂಜೆ ಮಾಡುತ್ತಿರುವ ಗರುಡಪ್ಪನ ಹೆಸರು ನಮೂದಾಗಿದೆ ಮತ್ತು ದಕ್ಷಿಣಕ್ಕೆ – ಭೈರಮ್ಮ ಮತ್ತು ರಾಮಯ್ಯನವರ ಜಮೀನು. ಯಾವ ಕ್ರಯಪತ್ರದ ಆಧಾರದ ಮೇಲೆ **1984** ರ ಕ್ರಯಪತ್ರದಲ್ಲಿ ಚಕ್ಕುಬಂಧಿಯನ್ನು ನಮೂದು ಮಾಡಿದ್ದೀರಾ ಎಂದರೆ ಗೊತ್ತಿಲ್ಲ. **1984** ರ ಪೂರ್ವದಲ್ಲಿ ದಾವಾ ಆಸ್ತಿಯನ್ನು ಸರ್ವೆ ಮಾಡಿಸಲಾಗಿದೆಯಾ ಎಂದರೆ ಗೊತ್ತಿಲ್ಲ. **1984** ರ ನಂತರ ಏನಾದರೂ ಸರ್ವೆ ಮಾಡಿಸಿದ್ದೀರಾ ಎಂದರೆ ಗೊತ್ತಿಲ್ಲ. ದಾವೆ ಹಾಕುವಾಗ ನೀಡಿದ ಚಕ್ಕುಬಂಧಿ ಈಗ ಬದಲಾಗಿದೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ಅದೇ ಇದೆ, ಮಾಲೀಕರು ಬದಲಾಗಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೂಲ ಸರ್ವೆ ನಂಬರ್ ಯಾವುದು ಎಂದರೆ ಗೊತ್ತಿಲ್ಲ.

**2010** ರಲ್ಲಿ ಈ ದಾವೆ ಹಾಕುವಾಗ ದಾವಾ ಆಸ್ತಿಯ ಪೂರ್ವದಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿ, ಪಶ್ಚಿಮಕ್ಕೆ – ಸರ್ವೆ ನಂ.**32** ರ ಪ್ರತಿವಾದಿಯರ ಆಸ್ತಿ, ಉತ್ತರಕ್ಕೆ –

ಆಂಜನೇಯಸ್ವಾಮಿ ಇನಾಮತಿ ಜಮೀನು ಮತ್ತು ದಕ್ಷಿಣಕ್ಕೆ–ವೀರೇಗೌಡರ ಜಮೀನು ಎಂದು ನಮೂದು ಮಾಡಿದ್ದೇವೆ. ಈ ದಾವೆ ಹಾಕುವಾಗ ನಾವು ತಪ್ಪು ಚಕ್ಕುಬಂಧಿ ಮತ್ತು ತಪ್ಪು ವಿಸ್ತೀರ್ಣವನ್ನು ತೋರಿಸಿದ್ದೇವೆ ಎಂದರೆ ಸಾಕ್ಷಿಯು ನನ್ನ ತಂದೆಯು ಕೇಸ್



ಹಾಕಿದ್ದಾರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮುಂದುವರೆದ ವಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.